## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಸ್.ಯು.ನರಸಿಂಹಯ್ಯ, ಅಂದಿನ ಪ್ರಭಾರ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ( ಪ್ರಸ್ತುತ ನಿವೃತ್ತ) ಇವರಿಗೆ ದಂಡನೆ ವಿಧಿಸಿರುವ ಆದೇಶವನ್ನು ಕೆಎಟಿ ಅರ್ಜಿ ಸಂಖ್ಯೆ : 9684/2015ರಲ್ಲಿ ದಿನಾಂಕ : 19.01.2018ರ ಆದೇಶದಂತೆ ಕ್ರಮವಹಿಸುವ ಬಗ್ಗೆ. – ಆದೇಶ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 96 ದಿನಾಂಕ 18.03.2002
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 316 ಜಿಪಅ 2011 ದಿನಾಂಕ 18.03.2002
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 316 ಜಿಪಅ 2011 ದಿನಾಂಕ 13.07.2015
4. ಕೆಎಟಿ ಅರ್ಜಿ ಸಂಖ್ಯೆ : 9684/2015ರಲ್ಲಿ ದಿನಾಂಕ : 19.01.2018ರ ಆದೇಶ
5. ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮನವಿ ದಿನಾಂಕ: 01.08.2018

*****

**ಪ್ರಸ್ತಾವನೆ:**

ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇವರು ಈ ಹಿಂದೆ ಚಿತ್ರದುರ್ಗ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಪ್ರಭಾರ ವ್ಯವಸ್ಥೆಯ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಸದರಿಯವರು ಸಾಮಾಗ್ರಿಗಳ ಖರೀದಿಯಲ್ಲಿ ಲೋಪವೆಸಗಿರುವ ಆರೋಪಗಳ ಕುರಿತು ಸದರಿಯವರ ವಿರುದ್ಧ ಕೈಗೊಂಡ ಇಲಾಖಾ ವಿಚಾರಣೆಯಲ್ಲಿ ಸಾಬೀತಾದ ಆರೋಪಕ್ಕೆ ಅನುಗುಣವಾಗಿ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 18.03.2002ರ ಆದೇಶದಲ್ಲಿ ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರ ನಿವೃತ್ತಿ ವೇತನದಿಂದ ಪ್ರತಿ ತಿಂಗಳು ರೂ. 100/- ರಂತೆ ಒಂದು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಲಾಗಿತ್ತು.

ಸದರಿ ದಂಡನಾದೇಶದ ವಿರುದ್ಧ ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ. 217/2003 ಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 2-4-2013ರಂದು ನೀಡಿರುವ ಅಂತಿಮ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 96 ದಿನಾಂಕ 18-03-2002ನ್ನು ರದ್ದುಪಡಿಸಿ, ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಹೊಸದಾಗಿ ನಿಯಮಾನುಸಾರ ಪರಿಶೀಲಿಸಲು ಪ್ರತಿವಾದಿಯಾದ ಸರ್ಕಾರಕ್ಕೆ ಸ್ವತಂತ್ರ ನೀಡಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರವು ಪ್ರಕರಣದ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 13.07.2015ರ ಆದೇಶದಲ್ಲಿ ಶ್ರೀ ಎಸ್.ಯು.ನರಸಿಂಹಯ್ಯ ಇವರ ನಿವೃತ್ತಿ ವೇತನದ ಶೇಕಡಾ 10 ರಷ್ಟನ್ನು ಮೂರು ವರ್ಷಗಳ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲಾಗಿತ್ತು.

ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಪುನ: ಸದರಿ ದಂಡನಾದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ. 9684/2015ನ್ನು ಸಲ್ಲಿಸಿದ್ದು, ಸದರಿ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 19.01.2018ರಂದು ನೀಡಿರುವ ಅಂತಿಮ ಆದೇಶದಲ್ಲಿ ದಿನಾಂಕ: 13.07.2015ರ ಆದೇಶವನ್ನು ರದ್ದುಪಡಿಸುವುದರ ಜೊತೆಗೆ ಈ ಹಿಂದೆ ಸದರಿಯವರಿಗೆ ದಿನಾಂಕ: 18.03.2002 ರಲ್ಲಿ ದಂಡನೆ ವಿಧಿಸಿದ್ದ ಸರ್ಕಾರದ ಆದೇಶವನ್ನು ಪುನಶ್ಚೇತನಗೊಳಿಸಿರುತ್ತದೆ.

ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ದಿನಾಂಕ: 01.08.2018ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, ಮಾನ್ಯ ನ್ಯಾಯ ಮಂಡಳಿಯ ದಿನಾಂಕ: 19.01.2018ರ ಆದೇಶದಂತೆ ತಮಗೆ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮಾನ್ಯ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 9684/2015ರಲ್ಲಿ ದಿನಾಂಕ: 19.01.2018ರಂದು ನೀಡಿರುವ ಅಂತಿಮ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯ ನೀಡಿರುತ್ತದೆ.

ಆದ್ದರಿಂದ, ಸರ್ಕಾರವು ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ದಿನಾಂಕ: 13.07.2015ರಂದು ವಿಧಿಸಿರುವ ದಂಡನಾದೇಶವನ್ನು ರದ್ದುಪಡಿಸಿ, ಸದರಿಯವರಿಗೆ ದಿನಾಂಕ: 18.03.2002ರಂದು ದಂಡನೆ ವಿಧಿಸಿದ್ದ ಆದೇಶವನ್ನು ಊರ್ಜಿತಗೊಳಿಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

<u>ಆದೇಶ ಸಂಖ್ಯೆ. ಗ್ರಾಅಪ 22 ಜಿಪಅ 2016 ಬೆಂಗಳೂರು, ದಿನಾಂಕ: 22.11.2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಸ್.ಯು.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ದಂಡನೆ ವಿಧಿಸಿ ಹೊರಡಿಸಲಾಗಿದ್ದ ಆದೇಶ ಸಂಖ್ಯೆ 316 ಜಿಪಅ 2011 ದಿನಾಂಕ 13.07.2015ನ್ನು ರದ್ದುಪಡಿಸಿ, ಸದರಿಯವರಿಗೆ ಆದೇಶ ಸಂಖ್ಯೆ ಗ್ರಾಅಪ 261 ಇಎನ್‌ಕ್ಯೂ 96 ದಿನಾಂಕ 18.03.2002ರ ಆದೇಶದಲ್ಲಿ ಅವರ ನಿವೃತ್ತಿ ವೇತನದಿಂದ ಪ್ರತಿ ತಿಂಗಳು ರೂ. 100/- ರಂತೆ ಒಂದು ವರ್ಷದ ಅವಧಿಗೆ ಕಡಿತಗೊಳಿಸುವಂತೆ ವಿಧಿಸಿದ್ದ ದಂಡನಾದೇಶವನ್ನು ಊರ್ಜಿತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22/11/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.

3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ.
6. ಶ್ರೀ ಎಸ್.ವಿ.ನರಸಿಂಹಯ್ಯ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.114, 2ನೇ ಮೈನ್, 7ನೇ ಕ್ರಾಸ್, ಕೆಂಗೇರಿ ಉಪ ನಗರ, ಬೆಂಗಳೂರು – ನೋಂದಾಯಿತ ಅಂಚೆ ಮೂಲಕ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು–ಎ & ಸಿ)
8. ಗ್ರಾ.ಅ.ಪಂ.ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
9. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
10. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.